ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂ.: 476/2021

..........................................................................

CW 05
PW 07

| | | |
|---|---|---|
| ಹೆಸರು | : | ನಾರಾಯಣ ದಡ್ಡಿ |
| ತಂದೆಯ ಹೆಸರು | : | ರಾಜಪ್ಪ |
| ವಯಸ್ಸು | : | 60 ವರ್ಷ |
| ಉದ್ಯೋಗ | : | ರೈತಾಪಿ |
| ವಾಸಸ್ಥಳ | : | ಅರ್ಲವಾಡ. |

ದಿನಾಂಕ 17-03-2026 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ನನಗೆ ಚಾಸಾ 1 ರಿಂದ 3 ಹಾಗೂ ಚಾಸಾ 6 ರಿಂದ 8 ರವರು ಪರಿಚಯ ವಿದ್ದಾರೆ. ಆರೋಪಿ ನಮ್ಮ ಊರಿನವರು ಹಾಗೂ ಪರಿಚಯ ಇರುತ್ತಾರೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ಜಪ್ತು ಪಂಚನಾಮೆ ಆಗಿದ್ದು, ಅದರಲ್ಲಿನ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಜಪ್ತು ಪಂಚನಾಮೆ ಯನ್ನು ಈಗಾಗಲೇ ನಿಪಿ 5 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 5 ಬಿ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು 7-8 ವರ್ಷಗಳ ಹಿಂದೆ ಪೊಲೀಸ ಠಾಣೆಯಲ್ಲಿ ಮಾಡಿರುತ್ತೇನೆ. ಯಾವ ಕಾರಣಕ್ಕೆ ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ.

ಸಾಕ್ಷಿಗೆ ಮು.ಮಾ. 1 ಅನ್ನು ತೋರಿಸಿ ಅದರ ಮೇಲೆ ಅಂಟಿಸಿದ ಚೀಟಿಯ ಮೇಲಿನ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು **ಮು.ಮಾ. 1 ಬಿ ಎಂದು** ಗುರುತಿಸಲಾಯಿತು. ಸಾಕ್ಷಿಗೆ ನ್ಯಾಯಾಲಯದ ಮುಂದೆ ಇರುವ ಚೀಲವನ್ನು ತೋರಿಸಲಾಗಿ ಸಾಕ್ಷಿ ಸದರಿ ಚೀಲವನ್ನು ಈ ಹಿಂದೆ ನೋಡಿಲ್ಲ ಎನ್ನುತ್ತಾರೆ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷ್ಯ ಹಾಗೂ ಪ್ರಕರಣದ ಇತರ ಅಂಶಗಳನ್ನು ಗಮನಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು ).

**ಪಾಟೀ ಸವಾಲು :** **ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ.**

ದಿನಾಂಕ 20-07-2016 ರಂದು ಪೊಲೀಸರು ನಿಮ್ಮನ್ನು ಮತ್ತು ಚಾಸಾ 4 ರವರನ್ನು ಠಾಣೆಗೆ ಕರೆಯಿಸಿ ಕೃತ್ಯದ ವಿಚಾರ ತಿಳಿಸಿ ಆರೋಪಿತನು ತಮ್ಮ ಮನೆಗೆ ಕರೆದುಕೊಂಡು ಹೋಗಿ ಕೋಣೆಯ ಒಳಗೆ ಅಟ್ಟದ ಮೇಲೆ ಗೋಣಿ ಚೀಲದಲ್ಲಿ ಇಟ್ಟಿದ್ದ ಕೃತ್ಯಕ್ಕೆ ಉಪಯೋಗಿಸಿದ ಬಂದೂಕನ್ನು ಗೋಣಿ ಚೀಲ ಸಮೇತ ಕೆಳಗಿಳಿಸಿ ಅದರಲ್ಲಿದ್ದ ಬಂದೂಕಿನ ಮೂರು ತುಂಡುಗಳನ್ನು ಸದರಿ ಬಂದೂಕಿನ ತುಂಡುಗಳನ್ನು ಮತ್ತು ಗೋಣಿ ಚೀಲವನ್ನು ನಿಮ್ಮ ಸಮಕ್ಷಮ ಜಪ್ತುಪಡಿಸಿಕೊಂಡು ಸೀಲ್ ಮಾಡಿ ಅರಗು ಹಾಕಿ ನಿಮ್ಮ ಸಹಿ ಪಡೆದು ಲೇಬಲ್ ಅಂಟಿಸಲಾಯಿತು, ಆರೋಪಿತನು ಮುಂದುವರೆದು ತಾನು ನಿಂತು ಚಾಸಾ 1 ರವರ ಮನೆಯ ಮೇಲೆ ಕುಳಿತ ಬೆಕ್ಕಿಗೆ ಬಂದೂಕಿನಿಂದ ಗುರು ಇಟ್ಟು ಹಾರಿಸಿದ ಜಾಗವನ್ನು ತೋರಿಸಿದನು, ಆ ಕುರಿತು ಪೊಲೀಸರು ಪಂಚನಾಮೆಯನ್ನು ಬೆಳಗ್ಗೆ 09-30 ರಿಂದ 11-30 ರವರಗೆ ಜರುಗಿಸಿ ಪಂಚನಾಮೆಯನ್ನು ನಿಮಗೆ ಓದಿ ಹೇಳಿ ನಿಮ್ಮಿಂದ ಸಹಿ ಪಡೆದರು ಎಂದರೆ ಸರಿಯಲ್ಲ, ಸಾಕ್ಷಿ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎನ್ನುತ್ತಾರೆ. ನಿಮ್ಮ ಸಮಕ್ಷಮ ಬಂದೂಕು ಮತ್ತು ಗೋಣಿ ಚೀಲವನ್ನು ನಿಮ್ಮ ಸಮಕ್ಷಮ ಆರೋಪಿತನ ಮನೆಯಲ್ಲಿ ಜಪ್ತುಪಡಿಸಿಕೊಂಡಿದ್ದರೂ ಸಹ ಆರೋಪಿತನು ನಿಮ್ಮ ಊರಿನವನು ಆಗಿದ್ದರಿಂದ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿತರ ಪರ ಶ್ರೀ ಎ ಎಫ್ ಕೆ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.